## ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ : **2016-17ನೇ** ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಸಹಾಯಧನ ಬಿಡುಗಡೆ ಕುರಿತು.

ಓದಲಾಗಿದೆ :
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ 5/40/2015-ಬಿಜಿ, ದಿನಾಂಕ 20.11.2015.
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 52 ಜೈಅಯೋ 2015(ಭಾಗ-1), ದಿನಾಂಕ 11.03.2016.
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 52 ಜೈಅಯೋ 2015(2)(ಭಾಗ-1), ದಿನಾಂಕ 15.03.2016.
4. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 52 ಜೈಅಯೋ 2015(3)(ಭಾಗ-1), ದಿನಾಂಕ 11.03.2016.

**ಪ್ರಸ್ತಾವನೆ :**

ಮೇಲೆ ಓದಲಾದ (1)ರ ಆದೇಶದಲ್ಲಿ ಕೇಂದ್ರ ಸರ್ಕಾರವು **2015-16ನೇ** ಸಾಲಿಗೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಿದ ಕೇಂದ್ರ ಸಹಾಯಧನ **ರೂ.863.50ಲಕ್ಷಗಳನ್ನು** ಮೇಲೆ ಓದಲಾದ (2), (3) & (4)ರ ಆದೇಶಗಳಲ್ಲಿ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿದೆ.

**2015-16ನೇ** ಸಾಲಿನಲ್ಲಿ **16000** ಜೈವಾನಿಲ ಸ್ಥಾವರಗಳ ಭೌತಿಕ ಗುರಿಗೆ **5834(ಸಾಮಾನ್ಯ ವರ್ಗ)** ಸ್ಥಾವರಗಳ ಪ್ರಗತಿಗೆ ಕೇಂದ್ರ ಸಹಾಯಧನ ಹಾಗೂ ಟರ್ನ್ ಕೀ ಫೀ ಮತ್ತು ನಿರ್ವಹಣಾ ವೆಚ್ಚ ಸೇರಿದಂತೆ **ರೂ.630.40ಲಕ್ಷಗಳ** ಅಗತ್ಯತೆಗೆ **ರೂ.863.50ಲಕ್ಷಗಳನ್ನು** ಬಿಡುಗಡೆ ಮಾಡಿರುವುದರಿಂದ **ರೂ.233.10ಲಕ್ಷಗಳನ್ನು** ಹೆಚ್ಚುವರಿಯಾಗಿ ಬಿಡುಗಡೆ ಮಾಡಿದೆ.

ಕೇಂದ್ರ ಸರ್ಕಾರವು ಓದಲಾದ (5)ರ ಪತ್ರದಲ್ಲಿ **2015-16ನೇ** ಸಾಲಿನಲ್ಲಿ ವೆಚ್ಚವಾಗದೆ ಬಾಕಿ ಉಳಿದ **ರೂ.233.10ಲಕ್ಷ**(ಆಡಳಿತಾತ್ಮಕ ವೆಚ್ಚ ಒಳಗೊಂಡಂತೆ)ಗಳನ್ನು ಪ್ರಸಕ್ತ ಸಾಲಿನಲ್ಲಿ ಅಂದರೆ ಮಾರ್ಚ್ 2017ರೊಳಗೆ ಕಾರ್ಯಕ್ರಮಕ್ಕೆ ಅನುಷ್ಠಾನಕ್ಕೆ ವಿನಿಯೋಗಿಸಿದಲ್ಲಿ **2016-17ನೇ** ಸಾಲಿಗೆ ಸಂಬಂಧಿಸಿದಂತೆ ಮುಂಗಡ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದೆಂದು ತಿಳಿಸಿದೆ.

ಇದರನ್ವಯ ಕಾರ್ಯಕ್ರಮದ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ **2015-16ನೇ** ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನದಲ್ಲಿ ವೆಚ್ಚ ಮಾಡದೇ ಬಾಕಿ ಉಳಿಸಿಕೊಂಡ ಜಿಲ್ಲೆಗಳಿಂದ ಅನುದಾನದ ಲಭ್ಯತೆಯ ಮಿತಿಗೊಳಪಟ್ಟು **ರೂ.165.81ಲಕ್ಷಗಳ** ಕೇಂದ್ರ ಸಹಾಯಧನವನ್ನು ಹಿಂಪಡೆದು **2016-17ನೇ** ಸಾಲಿನಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿದ ಜಿಲ್ಲೆಗಳಾದ **ಬೆಳಗಾವಿ, ಬೀದರ್** ಮತ್ತು ಕಲಬುರಗಿ **ಜಿಲ್ಲೆಗಳಿಗೆ** ವರ್ಗಾಯಿಸಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/92/ಜೈಅಯೋ/2016 ಬೆಂಗಳೂರು, ದಿನಾಂಕ 10.02.2017.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ **2015-16ನೇ** ಸಾಲಿನಲ್ಲಿ ಬಿಡುಗಡೆ ಮಾಡಿದ ಕೇಂದ್ರ ಅನುದಾನದಲ್ಲಿ ವೆಚ್ಚ ಮಾಡದೇ ಬಾಕಿ ಉಳಿಸಿಕೊಂಡಿರುವ ಕೆಳಕಂಡ ಜಿಲ್ಲಾ ಪಂಚಾಯತಿಗಳಿಂದ **ರೂ.165.81ಲಕ್ಷ(ನೂರ ಅರವತ್ತೈದು ಲಕ್ಷದ ಎಂಬತ್ತೊಂದು ಸಾವಿರ ರೂಪಾಯಿಗಳು ಮಾತ್ರ)**ಗಳನ್ನು ಲಭ್ಯತೆ ಅನುಸಾರ ಹಿಂಪಡೆದು

**2016-17ನೇ** ಸಾಲಿನಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿದ ಜಿಲ್ಲೆಗಳಿಗೆ ಅನುದಾನದ ಮಿತಿಗೊಳಪಟ್ಟು ವರ್ಗಾಯಿಸಿ ಬಿಡುಗಡೆ ಮಾಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲಾ ಪಂಚಾಯತ್ | ಲಭ್ಯವಿರುವ ಕೇಂದ್ರ ಸಹಾಯಧನ | ಹಿಂಪಡೆದ ಕೇಂದ್ರ ಸಹಾಯಧನ | ಹಿಂಪಡೆದ ಕೇಂದ್ರ ಅನುದಾನವನ್ನು ವರ್ಗಾಯಿಸಿದ ಜಿಲ್ಲೆ | | ವರ್ಗಾಯಿಸಿದ ಕೇಂದ್ರ ಸಹಾಯಧನ |
|---|---|---|---|---|---|---|
| 1 | ಬೆಂಗಳೂರು(ನ) | 11.52 | 11.52 | 1 | ಬೆಳಗಾವಿ | 101.12 |
| 2 | ಮೈಸೂರು | 24.00 | 24.00 | | | |
| 3 | ಹಾವೇರಿ | 24.52 | 24.52 | | | |
| 4 | ಚಿಕ್ಕಮಗಳೂರು | 17.13 | 17.13 | | | |
| 5 | ಬಳ್ಳಾರಿ | 19.59 | 19.59 | | | |
| 6 | ಹಾಸನ | 9.55 | 4.36 | | | |
| | | | 5.19 | 2 | ಕಲಬುರಗಿ | 32.24 |
| 7 | ಗದಗ | 5.21 | 5.21 | | | |
| 8 | ರಾಯಚೂರು | 3.34 | 3.34 | | | |
| 9 | ದಾವಣಗೆರೆ | 3.96 | 3.96 | | | |
| 10 | ಕೋಲಾರ | 3.24 | 3.24 | | | |
| 11 | ಶಿವಮೊಗ್ಗ | 3.39 | 3.39 | | | |
| 12 | ಬೆಂಗಳೂರು(ಗ್ರಾ) | 9.67 | 7.91 | | | |
| 13 | ಕೊಪ್ಪಳ | 11.10 | 11.10 | 3 | ಬೀದರ್ | 32.45 |
| 14 | ಉಡುಪಿ | 46.18 | 21.35 | | | |
| | **ಒಟ್ಟು** | **192.40** | **165.81** | | | **165.81** |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬೆಂಗಳೂರು(ನ), ಮೈಸೂರು, ಹಾವೇರಿ, ಚಿಕ್ಕಮಗಳೂರು, ಬಳ್ಳಾರಿ, ಹಾಸನ, ಗದಗ, ರಾಯಚೂರು, ದಾವಣಗೆರೆ, ಕೋಲಾರ, ಶಿವಮೊಗ್ಗ, ಬೆಂಗಳೂರು(ಗ್ರಾ), ಕೊಪ್ಪಳ ಮತ್ತು ಉಡುಪಿ ರವರು ಹಿಂಪಡೆದ ಅನುದಾನವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ, ಕಲಬುರಗಿ ಮತ್ತು ಬೀದರ್ ಜಿಲ್ಲೆಗಳಿಗೆ RTGS/DD ಮುಖೇನ ವರ್ಗಾಯಿಸುವುದು.

ಹಾಲಿ ವರ್ಗಾಯಿಸಲಾದ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಹಾಗೂ ವ್ಯಪಗತ ಮಾಡತಕ್ಕದಲ್ಲ. ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು **ಗಾಂಧಿ ಸಾಕ್ಷಿ ಕಾಯಕದಡಿ** ಇಂಧೀಕರಿಸುವ ಷರತ್ತಿಗೆ ಒಳಪಟ್ಟು ಮರು ಹಂಚಿಕೆ ಮಾಡಿ ವರ್ಗಾಯಿಸಿದೆ.

ಕೇಂದ್ರ ಸರ್ಕಾರವು ತಿಳಿಸಿದಂತೆ ಸದರಿ ಅನುದಾನವನ್ನು **ಮಾರ್ಚ್ 2017**ರೊಳಗೆ ಉದ್ದೇಶಿತ ಯೋಜನೆಗೆ ವಿನಿಯೋಗಿಸಬೇಕಿರುವ ನಿಟ್ಟಿನಲ್ಲಿ ವರ್ಗಾಯಿಸಿದ ಹಾಗೂ ವರ್ಗಾಯಿಸಲ್ಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕೂಡಲೇ ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

ಸದರಿ ಅನುದಾನವನ್ನು **2016-17ನೇ** ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ ಸಹಾಯಧನ ಪಾವತಿಸಲು ವಿನಿಯೋಗಿಸುವುದು ಹಾಗೂ ಲೆಕ್ಕ ಶೀರ್ಷಿಕೆ **2810-60-196-6-01(ಯೋಜನೆ)** ರಡಿ ವೆಚ್ಚ ಭರಿಸಿ ಫಲಾನುಭವಿಗಳ ವಿವರಗಳೊಂದಿಗೆ ನಿಗದಿತ ನಮೂನೆಯಲ್ಲಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ್ ಬೆಳಗಾವಿ, ಕಲಬುರಗಿ, ಬೀದರ್ ಬೆಂಗಳೂರು(ನ), ಮೈಸೂರು, ಹಾವೇರಿ, ಚಿಕ್ಕಮಗಳೂರು, ಬಳ್ಳಾರಿ, ಹಾಸನ, ಗದಗ, ರಾಯಚೂರು, ದಾವಣಗೆರೆ, ಕೋಲಾರ, ಶಿವಮೊಗ್ಗ, ಬೆಂಗಳೂರು(ಗ್ರಾ), ಕೊಪ್ಪಳ ಮತ್ತು ಉಡುಪಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಅಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
4. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
5. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.